ಮಾಡಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಸಮಾಧಾನಕರವಾದ ರೀತಿಯಲ್ಲಿ ಮಾಡಬೇಕಾಗಿತ್ತು. ಆದರೆ ಇಲ್ಲಿ ನಮಗೆ ಬಂದಿರುವಂತಹ ಮಾಹಿತಿಗಳ ಪ್ರಕಾರ ಮಕ್ಕಳ ಸಂಖ್ಯೆ ಸರ್ಕಾರಿ ಶಾಲೆಯಲ್ಲಿ ಮತ್ತೆ ಖಾಸಗಿ ಶಾಲೆಯಲ್ಲಿ ಒಂದೊಂದು ಸಾರಿ ಒಂದೊಂದು ಸಂಖ್ಯೆಯಲ್ಲಿ ಬರುತ್ತಿದೆ. ನಾವು ಮಕ್ಕಳೇ ಇಲ್ಲದಿರುವಂತಹ ಕೆಲವು ಶಾಲೆಗಳನ್ನು ಮುಚ್ಚಿದ್ದೇವೆ, ಕೆಲವನ್ನು ಸ್ಥಳಾಂತರ ಕೂಡ ಮಾಡಿದ್ದೇವೆ. ಮಾನ್ಯ ಪಾಟೀಲ್‌ರವರು ಕೇಳಿರುವಂತಹ ವಿಷಯದಲ್ಲಿ ವಸ್ತು ಸ್ಥಿತಿ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಅವರ ಹತ್ತಿರ ಚರ್ಚೆ ಮಾಡುತ್ತೇನೆ, ಏಕೆಂದರೆ ಇದು ಡೆಮಾಕ್ರಟಿಕ್ ಇನ್‌ಸ್ಟಿಟ್ಯೂಷನ್‌ಗಳಾಗಿರುವುದರಿಂದ ಸ್ಥಳೀಯ ಜನರ ಜೊತೆಗೆ ಕೂಡ ಚರ್ಚೆ ಮಾಡಿ ಯಾವುದನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಸ್ಥಳಾಂತರ ಮಾಡಬೇಕೆಂಬುದನ್ನು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಉರ್ದು ಶಾಲೆಯಲ್ಲಿ ಮಕ್ಕಳೇ ಇಲ್ಲ, ಇದನ್ನು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಇದು ಎಷ್ಟು ವರ್ಷಗಳಿಂದ ಪರಿಶೀಲನೆಯಲ್ಲಿದೆ? ಇದನ್ನು ಪ್ರಾರಂಭ ಮಾಡಿ ಎಷ್ಟು ವರ್ಷಗಳಾಯಿತು? ಅಲ್ಲಿಂದ ಇಲ್ಲಿಯವರೆಗೂ ಇನ್‌ಸ್ಪೆಕ್ಷನ್ ಮಾಡಿದ್ದೀರೊ, ಇಲ್ಲವೋ? ಅಲ್ಲಿ ಹುಡುಗರು ಇದ್ದಾರೋ, ಇಲ್ಲವೋ ಟೀಚರ್ಸ್ ಇದ್ದಾರೋ, ಇಲ್ಲವೋ, ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ ಇಂತಹ 224 ಶಾಲೆಗಳನ್ನು ಮುಚ್ಚಿದ್ದೇವೆ, ಇಲ್ಲಿ ಮಕ್ಕಳೇ ಇಲ್ಲ, ಹೆಸರಿಗೆ ಶಾಲೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ನಮಗೆ ಯಾವಾಗಲಾದರೂ ಗ್ರಾಂಟ್ ಸಿಗಲಿ ಎಂದು ಬೋರ್ಡ್‌ಗಳನ್ನು ಹಾಕಿಕೊಂಡು ನಡೆಸುತ್ತಿದ್ದಾರೆ. ಆದುದರಿಂದ ನಾವು ಇದನ್ನು ತೀವ್ರವಾಗಿ ತೆಗೆದುಕೊಂಡು ತಮ್ಮೊಂದಿಗೆ ಚರ್ಚೆ ಮಾಡಿ ಸಮಾಧಾನಕರವಾದ ಉತ್ತರ ಕೊಡುತ್ತೇನೆ.

ಬಾಗೇಪಲ್ಲಿ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಔಷಧಿಗಳ ಕೊರತೆ.

24(484)

ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು,

ಔಷಧಿಗಳು ಸರಿಯಾದ ರೀತಿಯಲ್ಲಿ ಪೂರೈಕೆ ಆಗದಿರುವುದು ಮತ್ತು ಆಸ್ಪತ್ರೆಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 15 ಆಸ್ಪತ್ರೆಗಳು ಬರುತ್ತವೆ. ಈ ಆಸ್ಪತ್ರೆಗಳ 25 ವೈದ್ಯರ ಹುದ್ದೆಗಳು ಮಂಜೂರಾಗಿದ್ದು 19 ಹುದ್ದೆಗಳು ಭರ್ತಿಯಾಗಿದ್ದು 6 ಹುದ್ದೆ ಖಾಲಿ ಇರುತ್ತವೆ. ಈ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಭರ್ತಿ ಮಾಡಲು ಜಿಲ್ಲಾಧಿಕಾರಿ, ಕೋಲಾರ, ಇವರಿಗೆ ಅಧಿಕಾರ ನೀಡಲಾಗಿದೆ. ಅವಶ್ಯಕ ಔಷಧಿಗಳನ್ನು ಸಮರ್ಪಕವಾಗಿ ವಿತರಿಸಲಾಗಿದೆ. ಈ ಆಸ್ಪತ್ರೆಗಳ ವ್ಯವಸ್ಥೆಗಳನ್ನು ಸರಿಪಡಿಸಲು ಕೆಳಗಿನಂತೆ ಕ್ರಮ ಕೈಗೊಂಡಿದೆ.

1. ಔಷಧಿಗಳನ್ನು ಸರಿಯಾಗಿ ಸಮರ್ಪಕವಾಗಿ ರೋಗಿಗಳಿಗೆ ವಿತರಿಸಲು ಸೂಚಿಸಿದೆ ಮತ್ತು ಸಾಕಷ್ಟು ಪ್ರಮಾಣದಲ್ಲಿ ಅವಶ್ಯಕ ಔಷಧಿಗಳನ್ನು ಒದಗಿಸಲಾಗಿದೆ.

2. ವೈದ್ಯಾಧಿಕಾರಿಗಳನ್ನು ಅವರು ಕೇಂದ್ರ ಸ್ಥಾನದಲ್ಲಿ ಇರಲು ಸೂಚಿಸಿದೆ. ತಪ್ಪಿದ್ದಲ್ಲಿ ಇಂಥವರ ಮೇಲೆ ಕ್ರಮ ಜರುಗಿಸಲು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ, ಇವರಿಗೆ ಅಧಿಕಾರ ನೀಡಲಾಗಿದೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಗರಗೆರೆಯಲ್ಲಿ 15 ಮನೆಗಳು ಸುಟ್ಟು ಹೋದಾಗ ನಾನು ಸ್ಥಳಕ್ಕೆ ಹೋಗಿದ್ದೆ. ಆಗ ಅಲ್ಲಿ ಜಿಲ್ಲಾಧಿಕಾರಿಯವರು ಡಾಕ್ಟರ್‌ಗಳು ಇಲ್ಲವೆಂದು ಹೇಳಿದರು. ಅವರು ನನಗೆ ಈ ರೀತಿ ಜನರ ಮುಂದೆ ಹೇಳಿದಾಗ ನಾನು ತಬ್ಬಿಬ್ಬು ಆದೆ. ನನಗೆ ಜಿಲ್ಲಾಧಿಕಾರಿಯವರು ಡಾಕ್ಟರ್‌ಗಳು ಇಲ್ಲವೆಂದು ಹೇಳುತ್ತಾರೆ. ನೀವು ಇವರಿಗೆ ಗುತ್ತಿಗೆ ಆಧಾರದ ಮೇಲೆ ಡಾಕ್ಟರ್‌ಗಳನ್ನು ನೇಮಕ ಮಾಡುವ ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ, ಅವರು ನೇಮಕ ಮಾಡಿಲ್ಲ. ಇವತ್ತಿಗೂ ಗುಡಿಬಂಡೆಯಲ್ಲಿ ಒಬ್ಬ ಮಹಿಳಾ ವೈದ್ಯೆ ಅಪಾಯಿಂಟ್ ಆಗಿ ಕೋಲಾರದಲ್ಲಿ ಕೆಲಸ ಮಾಡುವುದು, ಸಂಬಳವನ್ನು ನಮ್ಮ ಬಳಿ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಸುಮಾರು ವರ್ಷಗಳಿಂದ ಇಲ್ಲಿ ಮಹಿಳಾ ವೈದ್ಯರು ಇಲ್ಲವೆಂದು ಮುಷ್ಕರ ಕೂಡ ನಡೆದಿದೆ. ನಾನು ಕೂಡ ಜಿಲ್ಲಾಧಿಕಾರಿಯವರಿಗೆ ಗುತ್ತಿಗೆ ಆಧಾರದ ಮೇಲೆ ಒಬ್ಬ ವೈದ್ಯರನ್ನು ನೇಮಕ ಮಾಡಿ ಎಂದು ಪತ್ರವನ್ನು ಕೊಟ್ಟಿದ್ದೇನೆ, ಇವತ್ತಿನವರೆಗೂ ಇದನ್ನು ಭರ್ತಿ ಮಾಡುವುದಕ್ಕೆ ಆಗುತ್ತಿಲ್ಲ. ನಾನು ಈ ವಿಚಾರವನ್ನು ಡಾ|| ಎ.ಬಿ.ಮಾಲಕರೆಡ್ಡಿಯವರಿಗೆ

ತಿಳಿಸಿ, ತಾವು ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದೆ. ಅಲ್ಲಿ ಒಬ್ಬ ಹರಿಜನ ಹುಡುಗ ವೈದ್ಯಕೀಯ ಸೌಲಭ್ಯ ದೊರೆಯದೇ ಸತ್ತು ಹೋಗಿದ್ದಾನೆ. ತಾವು ಜಿಲ್ಲಾಧಿಕಾರಿಗಳಿಗೆ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಕೊಟ್ಟಿದ್ದೀರಿ. ಅವರೇ ನನ್ನನ್ನು ಜನಗಳ ಮುಂದೆ ಡಾಕ್ಟರ್ ಇಲ್ಲವೆಂದು ಹೇಳಿದರೆ ಆಗ ನನಗೆ ಯಾವ ಪರಿಸ್ಥಿತಿಯಾಗಬಹುದು? ನಮ್ಮನ್ನು ಜನರು ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ, ನಾವು ಇವರ ಸಮಸ್ಯೆಗಳನ್ನು ಪರಿಹರಿಸಬೇಕು. ಇನ್ನು ಮತ್ತೊಂದು ವಿಚಾರವೇನೆಂದರೆ ಔಷಧಗಳ ವಿಚಾರದಲ್ಲಿ ಹೇಳುವುದಾದರೆ, ತಾವು ಔಷಧಗಳು ಪೂರೈಕೆಯಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಇವತ್ತು ತಾವು ಔಷಧಗಳನ್ನು ಸರಿಯಾಗಿ ಕೊಟ್ಟಿದ್ದಿದ್ದರೆ ಈ ವಿಧಾನಸಭೆಯಲ್ಲಿ ಈ ಪ್ರಶ್ನೆಯನ್ನು ಕೇಳುವಂತಹ ಅಗತ್ಯವೂ ಇರಲಿಲ್ಲ. ಇವತ್ತು ಔಷಧಗಳು ಸಮರ್ಪಕವಾದ ರೀತಿಯಲ್ಲಿ ಪೂರೈಕೆ ಇಲ್ಲದೇ ಇರುವುದಕ್ಕೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಸರ್ಕಾರದಿಂದ ಶೇ.40ರಷ್ಟು ಔಷಧಗಳನ್ನು ಕೊಟ್ಟಿದ್ದಾರೆ, ಜಿಲ್ಲಾ ಪರಿಷತ್ತಿನಿಂದ ಶೇ.60ರಷ್ಟು ಬರಬೇಕಾದಂತಹ ಔಷಧಗಳು ಗುಡಿಬಂಡೆ ಹಾಗೂ ಬಾಗೆಪಲ್ಲಿಗೆ ಕೊಟ್ಟಿಲ್ಲ. ಈ ರೀತಿಯಾದರೆ ಗಡಿ ಪ್ರದೇಶದಲ್ಲಿರುವಂತಹ ಜನರು ಎಲ್ಲಿಗೆ ಹೋಗಬೇಕು? ಇನ್ನು ತಾವು ಅಂಬುಲೆನ್ಸ್ ವಾಹನವನ್ನು ಕೊಟ್ಟಿದ್ದೀರಿ, ಅದಕ್ಕೆ ಟೈರ್ ಇಲ್ಲ, ಡ್ರೈವರ್ ಇಲ್ಲ, ಈ ಗಡಿ ಪ್ರದೇಶದ ಜನರು ಯಾರನ್ನು ಕೇಳಬೇಕು? ನಾನು ಈ ವಿಚಾರವನ್ನು ಅರ್ಧ ಗಂಟೆ ಕಾಲದ ಚರ್ಚೆ ಮಾಡಬೇಕೆಂದು ಕೇಳಿದ್ದೆ, ಇನ್ನು 30 ಬೆಡ್ ಇರುವಂತಹ ಆಸ್ಪತ್ರೆಯನ್ನು 50 ಬೆಡ್ ಆಸ್ಪತ್ರೆಯನ್ನಾಗಿ ಮಾಡಿದ್ದಾರಾ? ಮಾಡಿದ್ದರೆ ಅದಕ್ಕೆ ಸಮರ್ಪಕವಾಗಿ ಸಿಬ್ಬಂದಿಗಳನ್ನು ಹಾಗೂ ಔಷಧವನ್ನು ಪೂರೈಕೆ ಮಾಡುತ್ತಿದ್ದಾರಾ? ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಫೀಜಾ ಫಜಲ್: ಮಾನ್ಯ ಅಧ್ಯಕ್ಷರೆ, ನಾವು ವೈದ್ಯರ ಕೊರತೆಯನ್ನು ಕಡಿಮೆ ಮಾಡಲು 550 ವೈದ್ಯರುಗಳನ್ನು ನೇಮಕ ಮಾಡಿದ್ದೇವೆ. ಆದರೆ 440 ವೈದ್ಯರುಗಳು ಮಾತ್ರ ಕೆಲಸಕ್ಕೆ ಹಾಜರಾಗಿದ್ದಾರೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಆದುದರಿಂದ ನಾವು ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ಕೆಲಸಕ್ಕೆ ತೆಗೆದಕೊಳ್ಳುತ್ತಿದ್ದೇವೆ, that is on roster-cum-merit system. ಈ ವಿಚಾರವಾಗಿ ಶ್ರೀಮತಿ ಮೋಟಮ್ಮನವರೂ ಸಹ ನಮ್ಮ ಜಿಲ್ಲೆಗೆ ಮಹಿಳಾ ವೈದ್ಯರು ಬರುವುದಕ್ಕೆ ತಯಾರಿಲ್ಲವೆಂದು ಹೇಳಿದರು. ಪುನಃ ಈ ವರ್ಷ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮುಖಾಂತರ 550 ವೈದ್ಯರುಗಳನ್ನು ನೇಮಕ ಮಾಡಲು ಅರ್ಜಿಯನ್ನು ಕರೆದಿದ್ದೇವೆ. ಈ ಹುದ್ದೆಗಳು ಖಾಲಿ ಇರುವಂಥಾದ್ದು ಎಲ್ಲರಿಗೂ ಗೊತ್ತಿದೆ, ಈ ವೈದ್ಯರುಗಳು ಅಲ್ಲಿ ಇರುವುದಕ್ಕೆ ಮನೆಗಳನ್ನು ಏರ್ಪಾಡು ಮಾಡಲು ಮತ್ತು ದುರಸ್ತಿ ಕೆಲಸಗಳಿಗೆಂದು ಎಂಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಸರ್ಕಾರದಿಂದ ವೈದ್ಯರುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಬೇಕಾದರೆ

ಅವರಿಗೆ ಇರಲು ಜಾಗವಿಲ್ಲದಿದ್ದರೆ ತೊಂದರೆಯಾಗುತ್ತದೆಂದು ನಾವು ಇದರ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಗೌರ್ನಮೆಂಟ್ ಮೆಡಿಕಲ್ ಸ್ಟೋರ್‌ನಿಂದ ಶೇಕಡ 40ರಷ್ಟು ಔಷಧಗಳನ್ನು ಕೊಡುತ್ತಾರೆ, ಉಳಿದ ಶೇಕಡ 60ರಷ್ಟು ಔಷಧಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಖರೀದಿ ಮಾಡಲು ಅಧಿಕಾರ ಕೊಡಲಾಗಿದೆ. ಈ ಪ್ರೈಮರಿ ಹೆಲ್ತ್ ಸೆಂಟರ್, ಸೆಕೆಂಡರಿ ಹೆಲ್ತ್ ಸೆಂಟರ್ ಹಾಗೂ ಜಿಲ್ಲಾ ಆಸ್ಪತ್ರೆಗಳೆಲ್ಲಾ ದೊಡ್ಡ ಖಾತೆಯಾಗಿದೆ. ಎಲ್ಲಾ ಮಾನ್ಯ ಸದಸ್ಯರು ಆಸಕ್ತಿಯನ್ನು ತೆಗೆದುಕೊಂಡು ಸರ್ಕಾರದೊಡನೆ ಸಹಕರಿಸಿ, ತಮ್ಮ ತಮ್ಮ ಜಿಲ್ಲೆಯಲ್ಲಿ ಏನು ಕೊರತೆ ಇದೆ ಎಂಬುದನ್ನು ನಮಗೆ ತಿಳಿಸಿದರೆ ನಾವು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಒಬ್ಬ ಮಂತ್ರಿ, ಎಲ್ಲಾ ಕಡೆ ಹೋಗಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಸ್ವಲ್ಪ ತೊಂದರೆಯಾಗುತ್ತದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಂತ್ರಿಗಳು ಎಲ್ಲಾ ಕಡೆ ಹೋಗುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ, ಅವರಿಗೆ ಸಿಬ್ಬಂದಿ ವರ್ಗವಿದೆ ಅಲ್ಲವೆ? ಕಳೆದ ಸಾರಿ ವಿಧಾನಸಭೆ ಅಧಿವೇಶನದಲ್ಲಿ ಖಾಲಿ ಇರುವ ಎಲ್ಲಾ ವೈದ್ಯರ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದರು, ಈ ವರ್ಷವು ಅದನ್ನೇ ಹೇಳುತ್ತಿದ್ದಾರೆ. ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದು ಸಮಸ್ಯೆಯನ್ನು ಬಗೆಹರಿಸುವುದಿಲ್ಲ; ಸಿಬ್ಬಂದಿ ವರ್ಗವಿದೆ, ಅವರಿಗೆ ಆದೇಶ ನೀಡಬೇಕು.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ವಿಧಾನಸಭೆ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ಅರ್ಧಗಂಟೆಕಾಲ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದ್ದೆವು, ಇವರಿಗೆ ಇಲ್ಲಿಯವರೆಗೆ ವೈದ್ಯರನ್ನು ಹಾಕಲಾಗಲಿಲ್ಲ. ಎರಡನೆಯದಾಗಿ ತಮಗೆ ಹಾಗೂ ಸರ್ಕಾರಕ್ಕೆ ಗೊತ್ತಿರುವಂತೆ ಫ್ಲೋರೆಸೆಸ್ ಖಾಯಿಲೆಯಿಂದ ನಮ್ಮ ಭಾಗದ ಸುಮಾರು 320 ಹಳ್ಳಿಗಳಲ್ಲಿ 20,000 ಜನ ನರಳುತ್ತಿದ್ದಾರೆ. ಇವತ್ತು ಒಬ್ಬ ಆರ್ಥೊಪಿಡಿಕ್ ವೈದ್ಯರನ್ನು ಅಲ್ಲಿ ನೇಮಕ ಮಾಡಲಾಗಲಿಲ್ಲ. ಇಂತಹ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆಂಬುದನ್ನು ಗಮನದಲ್ಲಿಟ್ಟುಕೊಂಡು ಆಸ್ಪತ್ರೆಯನ್ನು ಉನ್ನತ ಮಟ್ಟಕ್ಕೆ ತರುವುದಕ್ಕೆ ಮಹಿಳಾ ವೈದ್ಯರು, ಆರ್ಥೊಪಿಡಿಕ್ ವೈದ್ಯರು ಇತ್ಯಾದಿ ಸೌಲಭ್ಯಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಒದಗಿಸಿಕೊಡಲು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಮಂತ್ರಿಗಳು ಹೇಳಬೇಕು.

ಶ್ರೀಮತಿ. ನಫೀಜಾ ಫಜಲ್: ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನೊಂದು ವಿನಂತಿ ಮಾಡುತ್ತೇನೆ, ಮಾನ್ಯ ಸದಸ್ಯರ ಗಮನಕ್ಕೆ ಆರ್ಥೊಪಿಡಿಕ್ ವೈದ್ಯರು ಲಭ್ಯವಿರುವುದನ್ನು ನಮ್ಮ ಗಮನಕ್ಕೆ ತಂದರೆ ನಾವು ತಕ್ಷಣ ನೇಮಕಾತಿ ಮಾಡುತ್ತೇವೆ, ನಮಗೆ ಆರ್ಥೊಪಿಡಿಕ್ ವೈದ್ಯರು ಸಿಗುತ್ತಿಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ

ಸೇವೆ ಮಾಡಲು ವೈದ್ಯರು ತಯಾರಿರುವುದಿಲ್ಲ, ಇದು ನಿಜವಾದ ಸಮಸ್ಯೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ವೈದ್ಯರನ್ನು ನಾನು ಎಲ್ಲಿಂದ ಇವರಿಗೆ ತಂದು ಕೊಡಲಿ?

ಅಧ್ಯಕ್ಷರು: ನೀವು ಯಾರಾದರೂ ವೈದ್ಯರನ್ನು ಸಜೆಸ್ಟ್ ಮಾಡಿದರೆ ಅವರನ್ನೆ ನೇಮಕಾತಿ ಮಾಡುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ ಅಷ್ಟೆ.

ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಮಧುಮೇಹ ರೋಗ ನಿಯಂತ್ರಣ.

25(222)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಹೆಚ್ಚುತ್ತಾ ಇರುವ ಮಧುಮೇಹ(ಸಕ್ಕರೆ ಖಾಯಿಲೆ) ರೋಗದ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ವಿಶೇಷ ಯೋಜನೆಯನ್ನೇನಾದರೂ ರೂಪಿಸಿದೆಯೆ?

ಆ) ಪ್ರತಿ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಧುಮೇಹ ರೋಗದ ಬಗೆಗೆ ಪ್ರತ್ಯೇಕ ವಿಭಾಗ ಪ್ರಾರಂಭಿಸಿ ತಜ್ಞರನ್ನು ನಿಯೋಜಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಜಿಲ್ಲಾ ಮಧುಮೇಹ ನಿಯಂತ್ರಣ ಕಾರ್ಯಕ್ರಮವಿರುತ್ತದೆ. ನಗರ ಪ್ರದೇಶಗಳಿಗೆ ವಿಶೇಷವಾದ ಯೋಜನೆಯು ಇರುವುದಿಲ್ಲ.

ಆ) ಈಗಾಗಲೇ ಆಯಾ ಜಿಲ್ಲೆ ಆಸ್ಪತ್ರೆಗಳಲ್ಲಿ ವೈದ್ಯಕೀಯ ವಿಭಾಗದಲ್ಲಿ ಪರಿಣಿತ ವೈದ್ಯರು ಇದ್ದು, ಅವರು ಈ ಕಾಯಿಲೆಯ ಒಟ್ಟಾರೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಪ್ರತ್ಯೇಕ ವಿಭಾಗದ ಅವಶ್ಯಕತೆ ಇರುವುದಿಲ್ಲ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್: ಮಾನ್ಯ ಅಧ್ಯಕ್ಷರೆ, ಈ ಸಕ್ಕರೆ ಖಾಯಿಲೆ ಕೋಟ್ಯಾಂತರ ಜನರಿಗೆ ಹಬ್ಬಿಕೊಂಡಿದೆ, ಇದೂ ಕೂಡ ಅನೇಕ ಖಾಯಿಲೆಗಳ ತಾಯಿ ಇದ್ದಂತೆ, ಹಾಗಾಗಿ ಇದನ್ನು ಆಂಗ್ಲ ಔಷಧಿಯಿಂದ ಇದನ್ನು